Issue-1
Volume-1
Jan-June: 2018
ISSN: 2581-7728

# ಕವನಗಳು - ಹಂಸಲೇಖರವರ ಆಶೀರ್ವಾದ ಬೇಡುವ

**ಬೈಲೇಶ್ ವಿ.ಕೆ**

## ಹಂಸಲೇಖರವರ ಆಶೀರ್ವಾದ ಬೇಡುವ

ಬದುಕಲಿ ಏನಾದರು ಸಾಧಿಸು
ಕಾಲಾಹರಣ ಸರಿಯೇ ಯೋಚಿಸು|
ಸರಿಪಡಿಸುವುದು ಹೇಗೆಂದು ಚಿಂತಿಸು|
ಗೆಲ್ಲುವ ಗುಟ್ಟು ತಿಳಿದು ಜಯಿಸು|
ಬದುಕಲಿ ಏನಾದರು ಸಾದಿಸು|

ಜೀವನ ನಾಟಕ ವಿಧಿಯೇ ನಿರ್ದೇಶಕ|
ಗುರಿ ತಲುಪುವ ತನಕ ತಪ್ಪಿದ್ದಲ್ಲ ತವಕ|
ಸಾವಿರ ಸಲ ಸೋತರು ಮತ್ತೆ ಪ್ರಯತ್ನಿಸು|
ಬದುಕಲಿ ಏನಾದರು ಸಾದಿಸು|

ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ|
ಶ್ರಮಕ್ಕೆ ಸೋಲಿಲ್ಲ,ಪ್ರೀತಿಗೆ ಕೊನೆಯಿಲ್ಲ|
ಜಗದಲ್ಲಿ ಎಲ್ಲರನ್ನು ಪ್ರೀತಿಸು|
ಬದುಕಲಿ ಏನಾದರು ಸಾದಿಸು|

ಜೀವನ ಚಿಕ್ಕದಾದರೂ ಇಷ್ಟೇ ಅಲ್ಲ|
ಆದರೂನು ಅದು ಶಾಶ್ವತವಲ್ಲ|
ಮಣ್ಣು ಋಣ ತೀರಿಸು|
ಬದುಕಲಿ ಏನಾದರು ಸಾದಿಸು|

# ಹಂಬಲ

ರಸಪೂರ್ಣ ಒಲವಿನ ಅನುರಾಗ|
ಮಿಡಿವ ಹೃದಯದಲಿ ಬಂದಾಗ|
ಮಡಿವ ಯೋಚನೆಯೇ ಬರುವುದಿಲ್ಲ|
ಮೂಡುವುದು ಬದುಕಲಿ ನೂರಾರು ಹಂಬಲ|

ಎಳೆಯ ಮಗುವಂಥ ಮನಸು|
ಕಣ್ಮುಚ್ಚಿ ಕಂಡಿದೆ ಕನಸು|
ಕನಸಿನಿಂದ ಮನಸು ನಿದ್ರಿಸಿಲ್ಲ|
ಕಲಿಕೆಯ ಹಸಿವಲಿ ಕನಸಿನ ಹಂಬಲ|

ಮಿಡಿಯಲಿ ಕರುಳಿನ ತಂತಿ|
ಬರೆವೆನು ಪ್ರೇಮದ ಪಂಕ್ತಿ|
ಬಡಿಯಲಿ ಹೃದಯದ ತಬಲಿ|
ಗೆಲುವಿನ ಊರಿಗೆ ಪಯಣದ ಹಂಬಲ|

ಪ್ರೇಮದ ಅನುರಾಗದ ಬೆಸುಗೆ|
ಬಯಸಿದೆ ಬದುಕಿನ ಜೊತೆಗೆ|
ನಟನಾಗಿ ನಟಿಸಿ ತಿಳಿದಿಲ್ಲ|
ಕವಿಯಾಗಿ ಶೃಂಗಾರಕಾವ್ಯ ಬರೆಯೋ ಹಂಬಲ|